Volume-1, Issue-5, November-December, 2022 ISSN: 2583-3510

# ಸೃಜನಿ

# SRUJANI:

## Indian Journal of Innovative Research and Development (SIJIRD)

*Peer-Reviewed & Open Access Journal*

Srujani Innovative Research and Development Foundation
Chamarajanagar

## Editorial Board

**Managing Editor**
Dr. K. Shylaja
(Chamarajanagara)

**Editor in Chief**
Prof. M. Gurulingaiah
(Shivamogga)

**Associate Editors**
Dr. B. R. Manjunatha
(Mysuru)
Prof. Vijayalakshmi Manapura
(Mysuru)

**Editorial Board Members**
Prof.Y.H. Nayakwadi (Mysuru)
Mr. Praveen Kumar Mellahalli
(Mysuru)
Dr. Nagaraju N (Davanagere)
Dr. Appagere Somashekar
(Kalaburagi)
Dr. M. Rangaswamy (Chennai)
Mr. Mahendra M (Kalaburgi)
Mr. Madhuchandra B.R
(Bengaluru)
Dr. Rajashree S Maranoor (Gadag)
Dr. S. Mahadeva Kumar
(Andaman and Nicobar)
Dr. Mohan Kumara (Mysuru)
Dr. V. Srinivas (Mysuru)
Dr. S. Lokesh (Mandya)

**Technical Advisor**
Mr.Lokesh M (Mysore)
Mr. Kumaraswamy A N
(Chamarajanagar)

## Author Guidelines

- Online submission of the article should be sent as an attachment only in MS word to: editor@srujani.in
- Articles should be in Kannada or English
- Article should be 4,000 - 8,000 words in length
- It should be typed in Times New Roman Font for English and Nudi 01 e Font for Kannada Article, Text type should be 12 Font size, 1.5 lines spaced.
- Covering letter declaring that the submitted article is original work of the author and is unpublished must be sent on a separate page
- Abstract of 150 words along with key words should be given on the separate sheet
- Text Organization: The main text should begin on a separate page preferably divided into separate sections such as Introduction, Materials and Methodology, main Subject of the article and conclusion.
- References must be according to APA 7th Edition guidelines.
- Visit our website for more details: www.srujani.in

MOB: +91-7411851852 and +91-9164061581

| | ಅನುಕ್ರಮಣಿಕೆ | ಪು.ಸಂ |
|---|---|---|
| 1 | ಶರಣ ಹರಳಯ್ಯನವರ ಪವಾಡಗಳಲ್ಲಿ ಮೌಲ್ಯ ಪ್ರಜ್ಞೆ- *ಗುರುನಾಥ ವಿಠಲ* | 1 |
| 2 | ಶಿಶುನಾಳ ಷರೀಫರ ಜೀವನ ಮತ್ತು ಸಂದೇಶ – *ಚಿದಾನಂದ ಕೆ ಡಿ* | 7 |
| 3 | ಗಂಗಮ್ಮನ ಬೋರ್ ಪ್ರಕರಣ ಒಂದು ಲಲಿತ ಪ್ರಬಂಧ– *ವಿನೋದ ಕುಮಾರ ಭದ್ರಪ್ಪ* | 13 |
| 4 | Police administration in Hyderabad Karnataka under the Nizams- ***Ramya S*** | 17 |
| 5 | The life of Gautama Buddha- ***Dr. Revanna N Gangavadi*** | 23 |
| 6 | ಚಾಮರಾಜನಗರ ಜಿಲ್ಲೆಯ ಸ್ವಚ್ಛ ಭಾರತ ಅಭಿಯಾನದ ಪರಿಣಾಮ – *ವಿಜಯ ಕುಮಾರ್ ಎನ್.ಸಿ* | 29 |
| 7 | ಆರ್ಥಿಕ ಅಭಿವೃದ್ಧಿಯಲ್ಲಿ ಬಾಬು ಜಗಜೀವನರಾಮ್‌ರವರ ಚಿಂತನೆಗಳ ಪ್ರಸ್ತುತತೆ– *ಗುರುಪ್ರಸಾದ್.ವಿ.ಡಿ* | 36 |
| 8 | ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ನಿರ್ವಹಣೆಯಲ್ಲಿ ಪರಿವೀಕ್ಷಣಾ ಮಂದಿರಗಳ ಪಾತ್ರ – *ಶ್ರೀನಿವಾಸ ಮೂರ್ತಿ ಎ. ಟಿ & ಡಾ. ಎ. ಕೆ. ದೊಡ್ಡಮನಿ ಲೋಕರಾಜ್* | 41 |
| 9 | Challenges in effective health communication during Covid-19: A literature review- ***Nishitha Krishnaswamy & Prof. Niranjana*** | 50 |
| 10 | Performance and functioning of fisheries co-operative societies in Karnataka- ***Dr. Umesha K. M*** | 61 |
| 11 | ಬಿ ಷೇಕ್ ಅಲಿ ಬರವಣಿಗೆಗಳಲ್ಲಿ ಟೀಪು ಸುಲ್ತಾನನ ವಾಣಿಜ್ಯ ನೀತಿ: ಒಂದು ವಿಶ್ಲೇಷಣೆ – *ಸೈಯದ್ ಬರ್ಕತ್ ಕೆ ಎ* | 69 |
| 12 | 'ಹೀಗೊಂದು ಪ್ರಕರಣ' ಕಥೆಯಲ್ಲಿ ದಲಿತರ ಬದುಕಿನ ಅನಾವರಣ: ಒಂದು ಅಧ್ಯಯನ – *ಡಾ. ಹೆಚ್. ಎಸ್. ಪ್ರೇಮಲತ* | 78 |
| 13 | ಕೊರಚ ದ್ರಾವಿಡ ಭಾಷಾ ಸ್ವೀಕರಣ: ಒಂದು ವಿವೇಚನೆ – *ಡಾ. ಕೆ.ವಿ.ಜಯಪ್ಪ* | 84 |
| 14 | ಕನ್ನಡ ದಾಸ ಸಾಹಿತ್ಯದಲ್ಲಿ ಅನುಭಾವದ ಪರಿಕಲ್ಪನೆ – *ತಿಪ್ಪಣ್ಣ ಬ. ಕಂಬಾಗಿ* | 94 |
| 15 | ಶಿವಶರಣ ಸಂತ ಚೆನ್ನಯ್ಯ– *ಮುತ್ತುಕುಮಾರ್ ಎನ್.ಎಂ* | 98 |

| | | |
|---|---|---|
| 16 | ಸಾಹಿತ್ಯದಲ್ಲಿ 'ಸಗರ' ವೈಭವ - ***ಡಾ. ರಾಮರೆಡ್ಡಿ ಎಸ್. ರಡ್ಡೇರ*** | 104 |
| 17 | ವಿಜಯಪುರ ಪ್ರದೇಶದ ರಾಷ್ಟ್ರೀಯ ಚಳುವಳಿ ಹಾಗೂ ದಲಿತೋದ್ಧಾರ ಕಾರ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವ - ***ಹಣಮಂತ್ರಾಯ ಆರ್. ಹೊನ್ನಳ್ಳಿ & ಡಾ. ಎಸ್.ಕೆ. ಕಲ್ಲೋಳಿಕರ*** | 115 |
| 18 | Health communication and HIV/AIDS: A literature review - ***Nishitha Krishnaswamy & Prof. Niranjana*** | 123 |
| 19 | Role of community health workers in the Indian public health system - ***Sushma B S & Dr. Neema Gnanadev*** | 134 |
| 20 | Lift irrigation schemes in Bagalkot District under Upper Krishna Project: A View- ***Gururaj Chavhan & Dr. S. K. Kallolikar*** | 147 |
| 21 | ಮಹಿಳೆಯರ ವಿಮೋಚನೆಯಲ್ಲಿ ಸ್ವಾಯತ್ತ ಮಹಿಳಾ ಸಂಘಟನೆಗಳ ಪಾತ್ರ - ***ಡಾ. ಸರ್ವಮಂಗಳ*** | 156 |
| 22 | ತಮಿಳುನಾಡಿನ ಕಾಪಿಲಿಯನ್ ಸಮುದಾಯ : ಒಂದು ಅಧ್ಯಯನ - ***ಡಾ. ದಯಾನಂದ ಜಿ ಎಸ್*** | 162 |
| 23 | ಆಧುನಿಕ ಸಾಹಿತ್ಯದ ಕಾಲಘಟ್ಟಗಳು: ಒಂದು ಅವಲೋಕನ - ***ಡಾ. ಚಾಂದಸಾಬ ಮುಜಾವರ*** | 166 |
| 24 | ಶಾಂತರಸ ಹೆಂಬೇರಾಳುರವರ ಅನುವಾದಿತ ಸಣ್ಣಕಥೆಗಳಲ್ಲಿ ಸಾಮಾಜಿಕ ಚಿತ್ರಣ - ***ಶಿವಾನಂದ ಎಮ್ ವಾಲೀಕಾರ*** | 173 |
| 25 | ಮಹಿಳೆ ಮತ್ತು ಅಭಿವೃದ್ಧಿ - ***ಡಾ.ಮೋಹನ್ ಕುಮಾರ*** | 178 |
| 26 | ದಲಿತ ವಚನಕಾರ್ತಿಯರ ಜೀವನ ಮೌಲ್ಯಗಳ ಸಂಘರ್ಷ- ***ಡಾ. ಶಿವಲಿಂಗಪ್ಪ ಆಯ್. ಭಂಡಾರಿ*** | 182 |
| 27 | ಆಂಧ್ರ ಮತ್ತು ಕರ್ನಾಟಕ ಗಡಿಭಾಗದ ಜೀವನಾವರ್ತನ ಆಚರಣೆಗಳು: ಜಾನಪದೀಯ ವಿಶ್ಲೇಷಣೆ - ***ಐ ವೀರೇಶ*** | 189 |
| 28 | ವೀರಾಗ್ರಣಿ ಅಕ್ಕ ಮಹಾದೇವಿ:ಒಂದು ಅಧ್ಯಯನ - ***ಡಾ. ಅನುಪಮಾ ವೆಂ ಆದಾಪೂರ*** | 195 |

ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 182- 188
Bi-Monthly, Peer-Reviewed, Open Access, Indexed Journal

ISSN: 2583-3510
SIRDF JOURNALS
editor@srujani.in
www.srujani.in

# ದಲಿತ ವಚನಕಾರ್ತಿಯರ ಜೀವನ ಮೌಲ್ಯಗಳ ಸಂಘರ್ಷ

ಡಾ. ಶಿವಲಿಂಗಪ್ಪ ಆಯ್.ಭಂಡಾರಿ*

*ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜಿ.ಪಿ. ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ. ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ, ವಿಜಯಪುರ

***Abstract:***

ಹನ್ನೆರಡನೇ ಶತಮಾನದ ವಚನ ಸಾಹಿತ್ಯ ಭಾರತೀಯ ಚರಿತ್ರೆಯಲ್ಲಿ ಒಂದು ಮೈಲುಗಲ್ಲು. ಇತಿಹಾಸದ ಕಾಲಘಟ್ಟಗಳಲ್ಲಿ ಕಾಣದೆ ಇರುವ ಬದಲಾವಣೆಯನ್ನು ವಚನ ಚಳುವಳಿ ತಂದುಕೊಟ್ಟಿತು. ಇತಿಹಾಸ ಸೃಷ್ಟಿಯಾದಾಗಿನಿಂದಲೂ ಭಾರತದ ಬಹು ವರ್ಗಗಳಿಗೆ ದಕ್ಕದೆ ಹೋದ ಅವಕಾಶಗಳು ವಚನ ಚಳುವಳಿಯಲ್ಲಿ ದಕ್ಕುವಂತಾದವು. ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ವಂಚನೆಗೆ ಒಳಗಾಗಿ ಬದುಕುತಿದ್ದವರಿಗೆ ಇವೆಲ್ಲವು ಪ್ರಾಪ್ತವಾದದ್ದು ಜಗಜ್ಯೋತಿ ಖ್ಯಾತಿ ಅಣ್ಣ ಬಸವಣ್ಣನವರ ಸಂಕಲ್ಪದಿಂದ. ಈ ಲೇಖನದಲ್ಲಿ ದಲಿತ ವಚನಕಾರ್ತಿಯರ ಜೀವನ ಮೌಲ್ಯದ ಸಂಘರ್ಷವನ್ನು ವಿಶ್ಲೇಷಿಸಲಾಗಿದೆ.

***Keywords:*** *ವಚನ ಸಾಹಿತ್ಯ, ಬಸವಣ್ಣ, ಜೀವನಮೌಲ್ಯ, ಸಂಘರ್ಷ, ದಲಿತ ವಚನಕಾರ್ತಿಯರು.*

## ಪೀಠಿಕೆ

ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣ ಕುಟುಂಬವಾದರೂ ಬ್ರಾಹ್ಮಣ್ಯದ ಹಂಗನ್ನು ಅರಿದೊಗೆದು ಅಂಧಃಕಾರದಲ್ಲಿ ತೇಲಾಡುತ್ತಿದ್ದ ಅದೆಷ್ಟೋ ಜನರನ್ನು ಮುಖ್ಯವಾಹಿನಿಗೆ ತಂದು ನಿಲ್ಲಿಸಿದರು. ಮೊದಲಿಗೆ ನೋವುಂಡು ನಿರಾಶೆಯ ಬದುಕು ದೂಡುತ್ತಿದ್ದ ಕೆಳವರ್ಗದ ಸಮುದಾಯಗಳ ಬಗೆಗೆ, ಚಿಂತನ-ಮಂಥನ ಮಾಡುವುದರೊಂದಿಗೆ ಮಡುಗಟ್ಟಿ ನಿಂತ ಸಮಾಜದಲ್ಲಿ ಹೊಚ್ಚ ಹೊಸದಾದ ಪರಿವರ್ತನೆಯನ್ನು ತರಲು ಪ್ರಯತ್ನಿಸಿ ಸಫಲತೆಯನ್ನು ಕಂಡರು. ಈ ದಿಶೆಯಲ್ಲಿ ಬಸವಣ್ಣನವರ ಹೆಗಲಿಗೆ ಹೆಗಲನ್ನು ನೀಡಿ ಬೆಂಬಲವಾಗಿ ನಿಂತಿದ್ದು ಅಲಕ್ಷಕ್ಕೆ ಒಳಗಾಗಿ ಪಾಪದ ಬದುಕನ್ನು ದೂಡುತ್ತಿದ್ದ ಕೆಳವರ್ಗದ ಜನ.

'ಅಂಗದ ಮೇಲೆ ಲಿಂಗವುಳ್ಳವರೆಲ್ಲರು ಶಿವಭಕ್ತರೆಂದು' ಶರಣರು ಯಾವಾಗ ಸಾರಿದರೋ, ಆಗಲೇ ಕೆಳವರ್ಗದ ಜನ ಎಚ್ಚೆತ್ತುಕೊಂಡು ಶಿವಭಕ್ತರಾಗಿ, ಶಿವಶರಣರಾಗಿ ಬಸಬಣ್ಣನವರ ವಿಚಾರಗಳನ್ನು ಬೆಂಬಲಿಸಿದರು. ಸಮಾಜದಲ್ಲಿ ಮಡುಗಟ್ಟಿ ನಿಂತ ಮೌಢ್ಯತೆಗಳನ್ನು ಕಿತ್ತೊಗೆಯುವುದರ ಮೂಲಕ, ಜಾತಿ ಆಧಾರಿತ ಮೇಲು-ಕೀಳೆಂಬ ಭಾವನೆಗಳನ್ನು ಅಳಿಸಿ ಹಾಕಿ, ಸಮಾನತೆಯನ್ನು ತರ ಬಯಸಿ ವಚನ ಚಳುವಳಿಗೆ ಕಂಕಣಬದ್ಧರಾದರು. ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ'

***Please cite this article as:*** ಶಿವಲಿಂಗಪ್ಪ ಆಯ್.ಭಂಡಾರಿ. (2022). ದಲಿತ ವಚನಕಾರ್ತಿಯರ ಜೀವನ ಮೌಲ್ಯಗಳ ಸಂಘರ್ಷ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 1(5), 182–188.

ಎಂಬ ಸಂದೇಶ ಎಲ್ಲ ವರ್ಗದ ಶರಣರನ್ನು ಆಕರ್ಷಿಸಿತು. ಕಲ್ಯಾಣದಲ್ಲಿ ಸ್ಥಾಪಿಸಲ್ಪಟ್ಟ ಅನುಭವ ಮಂಟಪದಲ್ಲಿ ಎಲ್ಲ ಶರಣರು ಒಂದೆಡೆ ಸೇರಿ ಮುಕ್ತವಾಗಿ ಚರ್ಚಿಸಿದರು. ಹೀಗಾಗಿ ಎಲ್ಲ ವರ್ಗದ ಶಿವಶರಣರಿಗೆ ಅನುಭವ ಮಂಟಪವು ಸಾಂಸ್ಕೃತಿಕ ವೇದಿಕೆಯಾಗಿ ಅವರ ಪ್ರತಿಭೆಯನ್ನು ಹೊರಹಾಕುವ ಕೇಂದ್ರವಾಗಿ ಪರಿಣಮಿಸಿತು. ಬಸವಣ್ಣ–ಅಲ್ಲಮಪ್ರಭು, ಚೆನ್ನಬಸವಣ್ಣನವರಾದಿಯಾಗಿ ಹಲವು ಶರಣರು ಪ್ರೀತಿ ಮತ್ತು ಒಲುಮೆಯ ಸಂಬಂಧಗಳನ್ನು ಬೆಸೆಯಲು ಪ್ರಯತ್ನಿಸಿದರು.

### ದಲಿತ ವಚನಕಾರರು

ಮಾದರ ಚೆನ್ನಯ್ಯ, ಮಾದರ ದೂಳಯ್ಯ, ಸಮಗಾರ ಹರಳಯ್ಯ, ಉರಿಲಿಂಗಪೆದ್ದಿ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಡೋಹರ ಕಕ್ಕಯ್ಯ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವೆ, ಸತ್ಯಕ್ಕ, ಕಾಳವ್ವೆ, ಲಿಂಗಮ್ಮ, ಸೂಳೆಸಂಕವ್ವ ಮುಂತಾದ ದಲಿತ ವಚನಕಾರರು ಕಾಯಕದಲ್ಲಿ ನಿರತರಾಗಿ, ಸ್ವಾಭಿಮಾನಿ ಶರಣರಾಗಿ ತಾತ್ವಿಕ ಬದುಕನ್ನು ಬದುಕಿದರು. ಪುರುಷ ಪ್ರಧಾನ ಭಾರತೀಯ ಇತಿಹಾಸವನ್ನು ಅವಲೋಕನ ಮಾಡಿದರೆ, ವರ್ಣಧರ್ಮದ ಮೌಲ್ಯ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ಸಮಾಜಕ್ಕೆ ಪ್ರಾಶಸ್ತ್ಯವನ್ನು ನೀಡಲಾಗಿತ್ತು. ಆದರೆ ವಚನ ಚಳುವಳಿ ಅದೆಲ್ಲವನ್ನು ನಿರಾಕರಿಸಿ 'ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದು ಹೇಳುವ ಮೂಲಕ ಸ್ತ್ರೀಯರನ್ನು ಮುಖ್ಯ ಭೂಮಿಕೆಗೆ ಬರಮಾಡಿಕೊಂಡಿತು. ಭಾರತೀಯ ಚರಿತ್ರೆಯಲ್ಲಿ ಕುಲೀನಳಾಗಿ ಚಿತ್ರಿಸಲ್ಪಟ್ಟ ಸ್ತ್ರೀ ಹನ್ನೆರಡನೆಯ ಶತಮಾನದ ವಚನ ಯುಗದಲ್ಲಿ ಮೊಟ್ಟ ಮೊದಲಿಗೆ ಪುರುಷನಿಗೆ ಸಮ–ಸಮನಾಗಿ ಪಾಲ್ಗೊಂಡು ವರ್ಣ–ಧರ್ಮದ ಮೌಲ್ಯವ್ಯವಸ್ಥೆಯನ್ನು ತಲೆಕೆಳಗೆ ಮಾಡಿತು. ಹೀಗೆ ಅವಕಾಶವನ್ನು ಪಡೆದು ಬದುಕನ್ನು ಸಾರ್ಥಕಗೊಳಿಸಿಕೊಂಡ ಸ್ತ್ರೀಯರು ತಮ್ಮ ಸಾಧನೆಯ ಹಾದಿಯಲ್ಲಿ ಶಿವಶರಣೆಯರಾಗಿ ಹೆಸರು ಮಾಡಿದರು. ಇನ್ನು ಒಂದಷ್ಟು ಮುಂದುವರೆದು ಹೇಳುವುದಾದರೆ, ಮೇಲ್ವರ್ಗದ ಸ್ತ್ರೀಯರಂತೆ ಕೆಳವರ್ಗದ ಸ್ತ್ರೀಯರು ಬದುಕಿದ ಉದಾಹರಣೆಗಳಿಲ್ಲ. ಮೇಲ್ವರ್ಗದ ಸ್ತ್ರೀಯರ ಬದುಕಿಗೂ ಕೆಳವರ್ಗದ ಸ್ತ್ರೀಯರ ಬದುಕಿಗೂ ಬಹಳಷ್ಟು ವ್ಯತ್ಯಾಸವಿದೆ. ಆದರೆ ವಚನ ಯುಗದಲ್ಲಿ ಪಾಲ್ಗೊಂಡ ಕೆಳವರ್ಗದ ಶಿವಶರಣೆಯರು ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡದ್ದಲ್ಲದೆ, ಸಮಾಜದ ಅಂಕು–ಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದರು.

ವರ್ಣಾಧಾರಿತ ಸಾಂಸ್ಕೃತಿಕ ಮೌಲ್ಯಗಳು ಎಷ್ಟು ಸಹಜವಾಗಿ ಮತ್ತು ಸ್ವಾಭಾವಿಕವಾಗಿ ಚಲಾವಣೆಗೆ ಬಂದಿವೆಯೆಂದರೆ ಅವುಗಳನ್ನು ಯಾರು ವಿರೋಧಿಸುವಂತಿರಲಿಲ್ಲ ಎಂಬುವಷ್ಟರ ಮಟ್ಟಿಗೆ ನಿರಂತರವಾಗಿ ಬೆಳೆದು ಉಳಿದುಕೊಂಡು ಬಂದಿವೆ. ಇದಕ್ಕೆ ಮೂಲ ಕಾರಣ ಮನುಷ್ಯ–ಮನುಷ್ಯರಲ್ಲಿಯ ತರತಮದ ಭಾವ. ಈ ಭಾವನೆಗಳೇ ಧರ್ಮದ ನೆರಳಿನಲ್ಲಿ ಮನುಷ್ಯರ ಹುಟ್ಟನ್ನು ಆಧಾರವಾಗಿಸಿಕೊಂಡು ಜಾತಿಯನ್ನು ಹುಟ್ಟುಹಾಕಿದುವು. ಹೀಗೆ ಜಾತಿಯನ್ನು ಹುಟ್ಟು ಹಾಕಿ ಅದರ ಸಂಪೂರ್ಣ ಲಾಭ ಪಡೆದವರು ಬ್ರಾಹ್ಮಣರು. ಏಕೆಂದರೆ, ಇಡೀ ಭಾರತೀಯ ಚರಿತ್ರೆಯಲ್ಲಿ ಬ್ರಾಹ್ಮಣ ಸಮುದಾಯ ಎಲ್ಲರಿಗಿಂತಲೂ ತಾವು ಶ್ರೇಷ್ಠರೆಂದು ಪ್ರತಿಪಾದಿಸಿಕೊಳ್ಳುತ್ತಲೇ ಬಂದಿತ್ತು. ಈ ವೈದಿಕ ವ್ಯವಸ್ಥೆಯ ದಳ್ಳುರಿಗೆ ನಲುಗಿ ಹೋಗಿದ್ದ ದಲಿತ–ಶರಣರು ಮೊದಲು ಕಿಡಿ ಕಾರಿದ್ದು ಬ್ರಾಹ್ಮಣರ ವಿರುದ್ಧವೇ. ಕಾರಣ ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆಗೆ ಅಡ್ಡಿಯಾದುದು ಬ್ರಾಹ್ಮಣ್ಯವೇ ಹೊರತು, ಯಾವ ಅಧಿಕಾರ ಮತ್ತು ಆಡಳಿತಾತ್ಮಕ ವ್ಯವಸ್ಥೆ ಅಲ್ಲ ಎಂಬುದನ್ನು ದಲಿತ ವಚನಕಾರರು ಚೆನ್ನಾಗಿ ಗ್ರಹಿಸಿದ್ದರು. ವರ್ಗಮೂಲ ಬ್ರಾಹ್ಮಣತ್ವದ ಶ್ರೇಷ್ಠತೆ ಎಲ್ಲಿಯವರೆಗೆ ನಾಶಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆ ಸಿಗದು

ಎಂಬುದನ್ನು ಬಹಳ ಚೆನ್ನಾಗಿ ಅರಿತಿದ್ದರು. ಅಂತೆಯೆ ಮೊಟ್ಟ ಮೊದಲಿಗೆ ದಲಿತ ಶರಣರ ಹಾಗೂ ಶಿವಶರಣೆಯರ ಕೆಂಗಣ್ಣಿಗೆ ಗುರಿಯಾದವರು ವೈದಿಕಶಾಹಿ ಬ್ರಾಹ್ಮಣರು. "ಶರಣ ಉರಿಲಿಂಪೆದ್ದಿಯಂತೂ ಅಚ್ಚಭವಿತನದಿಂದ ನಿಚ್ಚನರಕಕ್ಕಿಳಿವ ಕರ್ಮಚಾಂಡಾಳಿ ವಿಪ್ಪರು......... ಸರಿಯೆಂಬುವನ ಬಾಯಲ್ಲಿ ಕೆರ್ಪನಿಕ್ಕಿ.......... ಎಂಬ ವಚನದಲ್ಲಿ ಬ್ರಾಹ್ಮಣತ್ವದ ಜನ್ಮವನ್ನೇ ಜಾಲಾಡುತ್ತಾರೆ. ಅವರು ಬಳಸುವ ಕರ್ಮ, ಚಾಂಡಾಳ ಮತ್ತು ಕೆರ್ಪ (ಕೆರ, ಚಪ್ಪಲಿ, ಪಾದರಕ್ಷೆ) ಎಂಬ ಪದಗಳ ತೀಕ್ಷಣ ಅರಿತವನ್ನು ಇಲ್ಲಿ ಗಮನಿಸಬೇಕು"[1] ದಲಿತ ಸಮುದಾಯಗಳನ್ನು ಹತ್ತಿಕ್ಕಿಲು ಬಳಸಿದ ಬ್ರಾಹ್ಮಣರ ಅಸ್ತ್ರಗಳೆಂದರೆ, ವೇದಶಾಸ್ತ್ರ, ಪುರಾಣಗಳು. ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದವರೆಲ್ಲರನ್ನು ಉಸಿರು ಕಟ್ಟಿಸಿ ಸಾಯಿಸುವಂತಹ ನಿರ್ಭಂದನೆಗಳನ್ನು ಹುಟ್ಟು ಹಾಕಿದ್ದೇ ವೇದ, ಶಾಸ್ತ್ರ, ಪುರಾಣಗಳು. ಅಂತೆಯೇ 'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳ ನಿಕ್ಕುವೆ ಪುರಾಣದ ಮೂಗ ಕೊಯ್ಯುವೆ ನೋಡಯ್ಯ' ಎಂದು ವೇದಶಾಸ್ತ್ರ, ಪುರಾಣಗಳ ವಿರುದ್ಧ ಶರಣ ಮಾದರ ಚೆನ್ನಯ್ಯ ಕಿಡಿ ಕಾರಿದ್ದನ್ನು ಗಮನಿಸಿದರೆ, ಮಿಕ್ಕುಳಿದ ಎಲ್ಲ ದಲಿತ ವಚನಕಾರರ ನಿಲುವು ಇದೆ ಆಗಿತ್ತು ಎಂಬುದಕ್ಕೆ ಅವರ ವಚನಗಳೇ ಸಾಕ್ಷಿಯಾಗಿ ನಿಲ್ಲುತ್ತವೆ.

ಪುರುಷ ಪ್ರಧಾನ ವ್ಯವಸ್ಥೆಯ ಅಡಿಯೊಳಗೆ ಬದುಕನ್ನು ನೂಕುತ್ತಾ ಬಂದಿರುವ ಮಹಿಳೆ, ವಚನ ಸಾಹಿತ್ಯದ ಸಂದರ್ಭದಲ್ಲಿ ಒಮ್ಮೇಲೆ ವಿವೇಚನಾಶೀಲಳಾಗಿ ತನ್ನ ಭೌತಿಕತೆಯನ್ನು ವಿಸ್ತರಿಸಿಕೊಂಡ ಶಿವಶರಣೆ ಉರಿಲಿಂಗಪೆದ್ದಿಯ ಪತ್ನಿ ಕಾಳವ್ವೆ ವರ್ಣಮೂಲ ವೈದಿಕ ವ್ಯವಸ್ಥೆಯನ್ನು ಪ್ರಶ್ನಿಸಿ ತರಾಟೆಗೆ ತೆಗೆದು ಕೊಳ್ಳುತ್ತಾಳೆ.

*"ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲ*
*ಕುಲಜ ಕುಲಜರೆಂಬರು*
*ಶಿವಗೆ ಪಂಚಾಮೃತವ ಕರೆವ*
*ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು*
*ಅವರೆಂತು ಕೀಳು ಜಾತಿಯಾದರೋ?*
*ಬ್ರಾಹ್ಮಣನುಂಡದ್ದು*
*ಪುಲ್ಲಿಗೆ ಶೋಭಿತವಾಗಿ ನಾಯಿನೆಕ್ಕಿಹೋಯಿತು*
*ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣನಾಗಿ ಶೋಭಿತವಾಯಿತು*
*ಅದೆಂತೆಂದಡೆ*
*ಸಿದ್ಧಲಿಕೆಯಾಯಿತು ಸಗ್ಗಳೆಯಾಯಿತು*
*ಸಿದ್ಧಲಿಕೆಯ ತುಪ್ಪವನು ಸಗ್ಗಳೆಯ ನೀರನು*
*ಶುದ್ಧವೆಂದು ಕುಡಿದ*
*ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯ*
*ಉರಿಲಿಂಗ ಪೆದ್ದಿಗಳರಸು ಒಲ್ಲನವ್ವ"* [2]

ಕಾಳವ್ವೆ ಪ್ರಶ್ನೆ ಎತ್ತಿರುವುದು ನೇರವಾಗಿ ಬ್ರಾಹ್ಮಣರನ್ನೇ. ಕಾರಣ, ಆಯಾ ಕಾಲ, ಪ್ರದೇಶಗಳಿಗೆ ಅನುಗುಣವಾಗಿ ಅವರದೇ ಆದ ಆಹಾರ ಪದ್ಧತಿ ಇದ್ದುದು ಸಹಜ. ಗೋವನ್ನು ಪವಿತ್ರವೆಂದು ನಂಬಿರುವ ಬ್ರಾಹ್ಮಣರು ಯಜ್ಞ-ಯಾಗಗಳ ಹೆಸರಲ್ಲಿ ಗೋವಿನ ಮಾಂಸವನ್ನು ಸೇವಿಸುತ್ತಿದ್ದರೆಂಬುದಕ್ಕೆ

ಸಾಕ್ಷಿಯಾಗುತ್ತವೆ. ಬ್ರಾಹ್ಮಣರು ತಿಂದದ್ದು ಶ್ರೇಷ್ಠವೆಂದದಾರೆ, ಮಾದಿಗರು ತಿಂದದ್ದು ಅದು ಹೇಗೆ ಕನಿಷ್ಠವಾದೀತು ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಹೀಗೆ ಅನ್ಯಾಯವಾಗಿ ಒಂದು ಸಮುದಾಯವನ್ನು ಹಿಕ್ಕಟ್ಟಿಗೆ ಸಿಲುಕಿಸಿ ಶೋಷಣೆಗೆಯ್ಯುತ್ತ ಬಂದಿರುವ ವಿಪ್ರ ಸಮುದಾಯಗಳನ್ನು ಬುದ್ಧಿಗೇಡಿಗಳೆಂದು ಕರೆದುದಲ್ಲದೆ ಅವರಿಗೆ ನರಕ ತಪ್ಪದು ಎನ್ನುವ ಕಾಳವ್ವೆಯ ಹೇಳಿಕೆ, ಇಡೀ ಭಾರತೀಯ ಚರಿತ್ರೆಯಲ್ಲಿ ಸಾಂಸ್ಕೃತಿಕ ಬದುಕನ್ನು ಪ್ರಶ್ನಿಸುವಂತಿದೆ.

ಶರಣರು ಅತ್ಯಂತ ಎತ್ತರದ ಬೌದ್ಧಿಕ ಸ್ತರವನ್ನು ಮುಟ್ಟಿದಾಗ್ಯೂ ಕುಲದ ನೆಲೆಯ ಪ್ರಶ್ನೆಯಿಂದ ಹೊರಗುಳಿದವರಲ್ಲ. ವೈದಿಕ ಶಾಹಿ ವ್ಯವಸ್ಥೆ ಬಹುಸಂಖ್ಯಾತರನ್ನು ಶೋಷಣೆಗೆ ಸಿಲುಕಿಸಿದ್ದ ಈ ಕುಲ ಮೂಲವನ್ನು ಪ್ರಶ್ನಿಸುವಂತಾಯಿತು. ಶ್ರೇಷ್ಠ ಮತ್ತು ಕನಿಷ್ಠ ಎಂಬ ತರತಮದ ಭಾವನೆಯಿಂದ ದಲಿತ ಜನ ಕಂಗೆಟ್ಟಿದ್ದರು ಎಂಬುದಕ್ಕೆ ಹಡಪದ ಅಪ್ಪಣ್ಣನ ಪತ್ನಿ ಲಿಂಗಮ್ಮನ ವಚನವನ್ನು ಪರಿಶೀಲಿಸಬಹುದು.

*"ಕನಿಷ್ಠ ಕುಲದಲ್ಲಿ ಹುಟ್ಟಿದೆ ಉತ್ತಮರಲ್ಲಿ ಬೆಳೆದೆ*
*ಸತ್ಯಶರಣರ ಪಾದವಿಡಿದೆ........*
*ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು*
*ಕಂಗಳ ಮುಂದಣ ಕತ್ತಲೆ ಹರಿಯಲೊಡನೆ*
*ಮಂಗಳದ ಮಹಾಬೆಳಗಿನೊಳಗೋಲಾಡಿ ಸುಖಿಯಾದೆನಯ್ಯ*
*ಅಪ್ಪಣ್ಣ ಪ್ರಿಯ ಚನ್ನಬಸವಣ್ಣ"*

ಕನಿಷ್ಠ ಮತ್ತು ಉತ್ತಮ ಎಂಬ ವರ್ಣಮೂಲ ಪರಿಕಲ್ಪನೆ ಬೌದ್ಧಿಕವಾಗಿ ಅತೀ ಎತ್ತರದಲ್ಲಿ ಬೆಳೆದುನಿಂತ ಶರಣೆ ಲಿಂಗಮ್ಮಳನ್ನು ಕಾಡದೆ ಬಿಟ್ಟಿಲ್ಲ. ನಾನು ಕನಿಷ್ಠ ಕುಲದಲ್ಲಿ ಹುಟ್ಟಿದೆನೆಂಬ ವಿಷಾದದ ಅಲೆಯೊಂದು ವಚನದಲ್ಲಿ ತೇಲಿ ಬರಬೇಕಾದರೆ ಅವಳು ಪಟ್ಟ ಪಾಡು ಎಂತಹದಿರಬೇಕು ಎಂಬುದನ್ನು ಗಮನಿಸಬೇಕು. ಕನಿಷ್ಠದಿಂದ ಸಾಗಿದ ಬದುಕು ಶ್ರೇಷ್ಠತನದ ಬೆಳಕನ್ನು ಕಾಣಬೇಕಾದರೆ, ಅದರ ಹಿಂದಿನ ಕಷ್ಟ ಏನೆಂಬುದನ್ನು 'ಕತ್ತಲೆ ಅರಿದು ಬೆಳಕು ಮೂಡಿ ಸುಖಿಯಾದೆನಯ್ಯ' ಎಂಬಲ್ಲಿ ಲಿಂಗಮ್ಮ ಏರಿದ ಎತ್ತರವನ್ನು ನೆನೆಯಬೇಕಾಗುತ್ತದೆ.

ವಚನ ಎಂದ ಕೂಡಲೆ ಅರ್ಥೈಸಿಕೊಳ್ಳುವುದು ಕಾಯಕ. ಹನ್ನೆರಡನೇ ಶತಮಾನದ ಎಲ್ಲ ಶಿವಶರಣರು ಕಾಯಕ ಯೋಗಿಗಳೇ ಆಗಿದ್ದರು. ಆದರೆ ಬಹು ಹಿಂದಿನಿಂದಲೂ ದೈಹಿಕ ಶ್ರಮವಿಲ್ಲದೆ ಫಲವನ್ನು ಅನಾಯಸವಾಗಿ ಅನುಭವಿಸುತ್ತಾ ಬಂದವರು ಮಾತ್ರ ಮೇಲ್ವರ್ಗದವರು. ಇದಕ್ಕೆ ತದ್ವಿರುದ್ಧವಾಗಿ ನಿಷ್ಠೆಯಿಂದ ದುಡಿದವರ ಶ್ರಮವನ್ನು ಹಾಗೂ ದುಡಿಮೆಗಾರರನ್ನು ಬಹು ಹೀನಾಯವಾಗಿ ನಡೆಸಿಕೊಂಡು ಬಂದರು. ಮೇಲ್ವರ್ಗದವರ ಅನ್ಯಾಯವನ್ನು ಸಹಿಸಿಕೊಂಡು ಬಂದಿರುವ ದಲಿತ ವರ್ಗದ ಜನ ಬಸವಣ್ಣನವರ ಭಕ್ತಿ, ಕಾಯಕ ಹಾಗೂ ದಾಸೋಹ ನಿಷ್ಠೆಗೆ ಮಾರುಹೋದ ದಲಿತ ಶರಣರು ಕಾಯಕದಲ್ಲಿಯೇ ಕೈಲಾಸವನ್ನು ಕಾಣಬಯಸಿದರಾದರೂ, ತಮ್ಮ ಹೃದಯದೊಳಗೆ ಮಡುಗಟ್ಟಿರುವ ನೋವಿನ ಭಾವನೆಗಳನ್ನೂ ಸಹಜವಾಗಿಯೇ ಹೊರ ಹಾಕಿದರು. ಶರಣರ ದೃಷ್ಟಿಯಲ್ಲಿ ಕಾಯಕ ಅತ್ಯಂತ ಮಹತ್ವದ ಸ್ಥಾನ ಪಡೆದುಕೊಂಡಿತ್ತು. ನಾವು ಮಾಡುವ ಕಾಯಕ ಸತ್ಯ ಶುದ್ಧವುಳ್ಳದ್ದಾಗಿರಬೇಕೆಂದು ಬಯಸಿದ ಶಿವಶರಣೆ ಕಾಳಮ್ಮ ಕನಿಷ್ಠ ಕುಲದಲ್ಲಿ ಹುಟ್ಟಿ ಕಷ್ಟ-ಕಾರ್ಪಣ್ಯಗಳನ್ನು ಎದುರಿಸಿ ಬಾಳಿದ ಕಾಯಕದ ಪರಿ ಈ ರೀತಿಯಿದೆ.

*"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ*
*ಸತ್ಯಶುದ್ಧವಿಲ್ಲದುದು ಕಾಯಕವಲ್ಲ*
*ಆಸೆಯೆಂಬುದು ಭವದ ಬೀಜ*
*ನೀರಾಸೆಯಂಬುದು ನಿತ್ಯ ಮುಕ್ತಿ*
*ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವ"*[4]

ಭಕ್ತನಾದವನು ಸತ್ಯಶುದ್ಧವುಳ್ಳ ಕಾಯಕಯೋಗಿಯಾಗಿರಬೇಕು. ಸತ್ಯಶುದ್ಧವಿಲ್ಲದ ಭಕ್ತಿ ಮತ್ತು ಕಾಯಕ ಅದು ಕಾಯಕವೇ ಅಲ್ಲ. ಅಂತೆಯೇ ಶರಣ ನುಲಿಯ ಚೆಂದಯ್ಯ 'ಕಂದಿಸಿ ಕುಂದಿಸಿ, ಬಂಧಿಸಿ ನೋಯಿಸಿ, ಕಂಡ ಕಂಡವರ ಬೇಡಿ ತಂದು ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟಕ್ಕೆ ಲಿಂಗಕ್ಕೆ ನೈವೇದ್ಯ ಸಲ್ಲದು' ಎಂದಿದ್ದಾರೆ. ಸ್ವತಃ ದುಡಿದು ತಂದು ಒಪ್ಪಿಸುವ ನೈವೇದ್ಯ ಲಿಂಗಕ್ಕೆ ಆದರಣೀಯ. ಒಂದು ದಿನ ಬಸವಣ್ಣನವರು ಆಯ್ದಕ್ಕಿ ಮಾರಯ್ಯನ ಕಷ್ಟವನ್ನು ಕಂಡು ಹಾದಿಯಲ್ಲಿ ಹೆಚ್ಚಿನ ಅಕ್ಕಿಯನ್ನು ಸುರಿದು ಹೋದಾಗ, ಮಾರಯ್ಯ ಮರೆತು ಹೆಚ್ಚಿನ ಅಕ್ಕಿಯನ್ನು ಆಯ್ದು ತಂದು ಪತ್ನಿಗೆ ಒಪ್ಪಿಸಿದಾಗ ಪತ್ನಿ ಶಿವಶರಣೆ ಆಯ್ದಕ್ಕಿ ಲಕ್ಕಮ್ಮ ಶರಣರ ಅತೀ ಆಸೆಯನ್ನು ಹೀಗೆ ವಿರೋಧಿಸುತ್ತಾಳೆ.

*"ಆಸೆಯಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ*
*ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯ*
*ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಮಾರಯ್ಯ*
*ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ"* [5]

ಅಂದಿನ ದುಡಿಮೆಯಿಂದ ಸಿಕ್ಕ ಪ್ರತಿಫಲ ಅಂದಿಗೆ ಮಾತ್ರ ಸೀಮಿತವಾಗಬೇಕು. ವಚನ ಸಾಹಿತ್ಯದ ಸಿದ್ಧಾಂತವೇ ದುಡಿದು ತಿನ್ನುವುದು. ಪ್ರತಿಯೋರ್ವನು ಪ್ರಮಾಣಿಕವಾಗಿ ದುಡಿಯಲೇಬೇಕು. ಅಂದಾಗಲೆ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರಲು ಸಾಧ್ಯವೆಂದು ನಂಬಿದ್ದ ಶರಣರು ಕಾಯಕಕ್ಕೆ ಬಹಳಷ್ಟು ಮಹತ್ವ ನೀಡಿದ್ದರು. ಈ ದಿಶೆಯಲ್ಲಿ ಲಕ್ಕಮ್ಮ ತನ್ನ ವಚನವೊಂದರಲ್ಲಿ 'ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತಶುದ್ಧದಲ್ಲಿ ಕಾಯಕ ಮಾಡಿ ಸದ್ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷ್ಮೀ ತಾನಾಗಿಪ್ಪಳು, ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಸೇವೆಯುಳ್ಳನ್ನಕ್ಕರ' ಎಂದು ಗಂಡನಿಗೆ ಕಾಯಕದ ಮಹತ್ವವನ್ನು ಸ್ಪಷ್ಟ ಪಡಿಸುತ್ತಾಳೆ. ಬಸವಣ್ಣನವರು ಒಂದೆಡೆ ಕಾಯಕದ ಪರಿಶುದ್ಧತೆಯನ್ನು ಕುರಿತು 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ' ಎಂದಿರುವುದನ್ನು ನೋಡಿದರೆ, ವೃತ್ತಿ ಯಾವುದೇ ಆಗಿರಲಿ ಅದನ್ನು ನಿಷ್ಠೆಯಿಂದ ನೆರವೇರಿಸಬೇಕೆಂಬುದು ಶರಣರ ಕಾಯಕ ನಿಷ್ಠೆಯಾಗಿತ್ತು.

ಬಾಚಿ ಕಾಯಕದ ಬಸಪ್ಪನ ಹೆಂಡತಿ ಕಾಳವ್ವೆ ತನ್ನ ವಚನವೊಂದರಲ್ಲಿ:

*"ಕಾಯಕ ತಪ್ಪಿದಡೆ ಸೈರಿಸಬಾರದು*
*ವ್ರತ ತಪ್ಪಿದರೆಂತು ಸೈರಿಸಬಹುದು*
*ಕರ್ಮಹರಾ ಕಾಳೇಶ್ವರ"* [6]

ಯಾವುದೇ ವ್ರತಾಚಾರಣೆಗಳಿಗಿಂತಲೂ ಕಾಯಕ ನಿಷ್ಠೆ ಪರಮ ಶ್ರೇಷ್ಠವಾದುದು. ನುಲಿಯ ಚಂದಯ್ಯ ಹೇಳುವಂತೆ 'ಕಾಯಕದಲ್ಲಿ ನಿರತನಾದಡೆ ಗುರುದರುಶನ ವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು' ಏಕೆಂದರೆ ಶರಣರಿಗೆ ಕಾಯಕವೇ ಕೈಲಾಸವಾಗಿತ್ತು.

ಇನ್ನೊಂದೆಡೆ ಆಯ್ದಕ್ಕಿ ಮಾರಯ್ಯ 'ಕಾಯಕದಾಸೋಹಗಳು ಕೂಡಿದಲ್ಲಿ ಅದೇ ಶಿವ ಜೀವೈಕ್ಯವು' ಎನ್ನವಲ್ಲಿ ದುಡಿತಕ್ಕೂ ಜೀವಕ್ಕೂ ಅವಿನಾಭಾವ ಸಂಬಂಧವಿರಿಸಿಕೊಂಡಿದ್ದು ಕಂಡುಬರುತ್ತದೆ. "ಎಲ್ಲಿ ದುಡಿಮೆ ಇಲ್ಲವೋ ಅಲ್ಲಿ ಬದುಕು(ಜೀವ) ಇರಲಾರದು ಹಾಗೆಯೇ ಶರಣರ ಪ್ರಕಾರ ಎಲ್ಲಿ ದಾಸೋಹವಿಲ್ಲವೋ ಅಲ್ಲಿ ದೈವವೆಂಬುದರ ಸುಳಿವಿರಲಿಕ್ಕೆ ಸಾಧ್ಯವಿಲ್ಲ. ಅಂದರೆ, ಶರಣನಾದವಗೆ ದುಡಿಮೆಯ ಮುಖ್ಯವಾದ ಇನ್ನೊಂದು ಕರ್ತವ್ಯವೆಂದರೆ, ದಾಸೋಹ"[7] ಶರಣರ ವೃತ್ತಿಗಳೆಲ್ಲವು ಕಾಯಕಕ್ಕೆ ಸಮನಾದ ಗೌರವ ಪಡೆದು ಹೆಮ್ಮೆಯಿಂದ ಬೀಗುವಂತೆ ಮಾಡಿದ್ದುವು. ಹೀಗಾಗಿ ವೃತ್ತಿಯನ್ನು ಮೂಲ ಹೆಸರನ್ನಾಗಿ ಇಟ್ಟುಕೊಂಡು ಎದೆ ತಟ್ಟಿಕೊಂಡು ಹೇಳಲು ಸಾಧ್ಯವಾಯಿತು.

ಕನಿಷ್ಠ ಕುಲದಲ್ಲಿ ಹುಟ್ಟಿ ಆಧ್ಯಾತ್ಮ ಸುಖದ ಸವಿಯನ್ನುಂಡು ಪರಮ ಸುಖಿಯಾಗಿ ಹೆಸರು ಮಾಡಿದ ಹಡಪದ ಅಪ್ಪಣ್ಣನ ಹೆಂಡತಿ ಲಿಂಗಮ್ಮ ತಾನು ಸಾಧಿಸಿದ ಸಾಧನೆಯ ಹಂತವನ್ನು ಹೀಗೆ ಬಿಚ್ಚಿಡುತ್ತಾಳೆ.

*"ಕನಿಷ್ಠ ಕುಲದಲ್ಲಿ ಹುಟ್ಟಿದೆ ಉತ್ತಮರಲ್ಲಿ ಬೆಳೆದೆ ಸತ್ಯ ಶರಣರ ಪಾದವಿಡಿದೆ*
*ಆ ಶರಣರ ಪಾದವಿಡಿದು ಗುರುವ ಕಂಡೆ ಲಿಂಗವ ಕಂಡೆ*
*ಜಂಗಮವ ಕಂಡೆ ಪಾದೋದಕವ ಕಂಡೆ ಪ್ರಸಾದವ ಕಂಡೆ*
*ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು"* [8]

ಹೆಣ್ಣನ್ನು ಅಸಹಾಯಕಳೆಂದು ಜರೆದು ಶತಮಾನಗಳಿಂದಲೂ ಮೂಲೆಗುಂಪಾಗಿಸಿದ್ದ ಭಾರತೀಯ ಸಮಾಜದಲ್ಲಿ ಲಿಂಗಮ್ಮ ಮಾಡಿದ ಸಾಧನೆ ಸಣ್ಣದೇನಲ್ಲ. ಅಕ್ಷರದ ಗಂಧವರಿಯದ ಕುಲದಲ್ಲಿ ಹುಟ್ಟಿ ಕತ್ತಲೆಯನ್ನು ಅರಿದೊಗೆದು ಜ್ಞಾನದ ತುತ್ತ ತುದಿಯನ್ನು ಮುಟ್ಟಿದ ಲಿಂಗಮ್ಮ ಮನುಷ್ಯನ ಮನಸ್ಸನ್ನು ಮರ್ಕಟನಿಗೆ ಹೋಲಿಸಿದ್ದನ್ನು ಕಾಣುತ್ತೇವೆ.

*"ಜಲದೊಳಗಣ ಸೂರ್ಯನ ಪ್ರತಿಬಿಂಬದಂತಿರಬೇಕು*
*ಮೋಡವಿಲ್ಲದ ಚಂದ್ರನಂತಿರಬೇಕು*
*ಬೆಳಗಿನ ದರ್ಪಣದಂತಿರಬೇಕು*
*ಇಂತು ಚಿತ್ತಶುದ್ಧವಾದಲ್ಲದೆ ಆಕರ್ತೃವಿನ ನೆಲೆಯ ಕಾಣಬಾರದು"*

ಎನ್ನುವ ಲಿಂಗಮ್ಮ ಮಾನವನ ಮನಸ್ಸು ಹೇಗಿರಬೇಕೆಂದರೆ, ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ, ಬೆಳಗಿದ ದರ್ಪಣದಂತೆ ನಿರ್ಮಲವಾಗಿರಬೇಕೆಂದು ಆಶಿಸುತ್ತಾಳೆ.

ಮಾನವ ಶರೀರ ಶಾಶ್ವತವಲ್ಲ. ಆದುದರಿಂದ ಜೀವಂತವಿರುವಾಗಲೆ ಏನಾದರೊಂದು ಒಳ್ಳೆಯದನ್ನು ಮಾಡಬೇಕು. ಒಂದೊಂದು ಹಂತವನ್ನು ಏರಿ ಆಧ್ಯಾತ್ಮದ ಶಿಖರ ಪ್ರಾಯಳಗಿದ್ದ ಮುಕ್ತಾಯಕ್ಕ ಅಣ್ಣ ಅಜಗಣ್ಣನ ಸಾವಿನಿಂದ ಜರ್ಜಿತಳಾಗಿ ದುಃಖದ ಮಡುವಿನೊಳಗೆ ತೇಲಾಡುತ್ತಾಳೆ. ಪರಮ ಜ್ಞಾನಿ ಅಲ್ಲಮ ಪ್ರಭುದೇವರೊಂದಿಗೆ ನಡೆಸುವ ಸಂಭಾಷಣೆಯಲ್ಲಿ ಮುಕ್ತಾಯಕ್ಕಳ ಜ್ಞಾನದ ಅರಹು ಬಿಚ್ಚುತ್ತಾ ಹೋಗುತ್ತದೆ. ಈ ಹಂತದಲ್ಲಿ ಅವಳ ಭಾವನೆಗಳು ಎಡೆಗೊಂಡು ವಚನಗಳಾಗಿ ಕಾವ್ಯ ಸತ್ವವನ್ನು ಪಡೆದುದಕ್ಕೆ ಮುಕ್ತಾಯಕ್ಕಳ ವಚನಗಳೇ ಸಾಕ್ಷಿಯಗುತ್ತವೆ.

ಶರಣರು ಸಾರಿದಂತೆ 'ನುಡಿದಂತೆ ನಡೆ ಇದೇ ಜನ್ಮ ಕಡೆ' ಎಂಬಂತೆಯೆ ವಚನ ಯುಗದ ಸಂದರ್ಭದಲ್ಲಿ ದಲಿತ ಶರಣ/ಶರಣೆಯರು ನುಡಿದಂತೆ ನಡೆದು ಜನ್ಮವನ್ನು ಸಾರ್ಥಗೊಳಿಸಿಕೊಂಡಿದ್ದರು. ದಲಿತರೆಂದರೆ ಕನಿಷ್ಠರು, ನೀಚರು, ಅಸ್ಪೃಶ್ಯರು ಎಂದು ವೇದಕಾಲೀನ ದಿನಗಳಿಂದ ಹೀನಾಯವಾಗಿ

ಕಂಡಿದ್ದ ಭಾರತೀಯ ಸಮಾಜ, ವಚನ ಚಳುವಳಿಯ ಸಂದರ್ಭದಲ್ಲಿ ದಲಿತ ಶಿವಶರಣ/ಶಿವಶರಣೆಯರನ್ನು ಕಂಡು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿತ್ತು. ಕೆಳಸ್ತರದ ಸಮಾಜದಿಂದ ಒಂದೊಂದು ಮೆಟ್ಟಿಲುಗಳನ್ನು ಮೇಲೇರಿ ನಿಂತ ದಲಿತ ವಚನಕಾರರು ಸಮಾಜ ಮುಖಿಯಾದ ಚಿಂತನೆ ಮಾಡಿದರು. ಅಷ್ಟೆ ಅಲ್ಲ, ಅದನ್ನು ಕಾಯಕ ರೂಪದಲ್ಲಿ ತಂದು ಉಳಿದವರಿಗೆ ಮಾದರಿಯಾದರು. ತಾವು ಯಾರ ಸರಿಸಾಟಿಯಾಗಿ ಬಾಳಬೇಕೆಂದು ಇಚ್ಛಿಸಿದ್ದರೋ ಅವರೊಂದಿಗೆ ಸೇರಿ ಇಡೀ ಭಾರತೀಯ ಸಮಾಜದ ಸಮಾನತೆಗಾಗಿ ಪ್ರಯತ್ನಿಸಿದರು. ಅಲ್ಲದೆ ಈ ಎಲ್ಲ ಸುಧಾರಣೆಗಳು ಧಾರ್ಮಿಕ ಚೌಕಟ್ಟಿನ ಮಿತಿಯ ಒಳಗೆ ಕಾಯಕ ರೂಪಕ್ಕೆ ತರಲು ಪ್ರಯತ್ನಿಸಿದ್ದರಿಂದಾಗಿ ಹೇಳಿಕೊಳ್ಳುವಷ್ಟರ ಮಟ್ಟಿಗೆ ದಲಿತ ಸಮುದಾಯಗಳ ಅಭಿವೃದ್ಧಿ ಕಾಣದೆ ಹೋದುವು. ಆದಾಗ್ಯ ದಲಿತೋದ್ಧಾರದ ಪಣತೊಟ್ಟು ಹುಟ್ಟಿಕೊಂಡ ಸಂಘಟನೆಗಳಿಗೆ ಪ್ರೇರಣೆಯನ್ನುಂಟು ಮಾಡಿದ್ದರಲ್ಲಿ ಎರಡು ಮಾತಿಲ್ಲ.

**ಕೊನೆಟಿಪ್ಪಣಿಗಳು**


1. ಮಲ್ಲೇದೇವರು ಎಚ್.ಪಿ. (ಸಂ.) (1985). *ಉರಿಲಿಂಗಪೆದ್ದಿ ವಚನಗಳು.* ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ. ಪು.ಸಂ. 16–162
2. ವೀರಣ್ಣ ರಾಜೂರ. (ಸಂ.). (1993). *ಶಿವಶರಣೆಯರ ವಚನಗಳು: ಸಮಗ್ರ ವಚನ ಸಂಪುಟ–5,* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಪು.ಸಂ.206
3. ಅದೇ., ಪು.ಸಂ.342
4. ಜಗದಂಬಾ ಮಲ್ಲೇದೇವರು. ಇಪ್ಪತ್ತೈದು *ವಚನ ಕಾರ್ತಿಯರ ಜೀವನ ಹಾಗೂ ಸಾಧನೆ.* ಶ್ರೀ ಜಗದ್ಗುರು ಗಂಗಾಧರ ಪ್ರಚಾರಕ ಮಂಡಳ, ಮೂರು ಸಾವಿರ ಮಠ. ಪು.ಸಂ.47
5. ಪೂರ್ವೋಕ್ತ–2, ಪು.ಸಂ. 268
6. ಹಿರೇಮಠ ಆರ್.ಸಿ.. (1972). *ಸಕಲ ಪುರಾತನರ ವಚನಗಳು: ಸಂಪುಟ 3 ವಚನ 2.* ಕರ್ನಾಟಕ ವಿಶ್ವವಿದ್ಯಲಯ. ಪು.ಸಂ.265
7. ಮನ ಜವರಯ್ಯ. (1997). ದಲಿತ ವರ್ಗದ ಶರಣರು ಒಂದು ಅಧ್ಯಯನ. ಸಿದ್ಧಾರ್ಥ ಗ್ರಂಥಮಾಲೆ, ಪು.ಸಂ.130
8. ಹಿರೇಮಠ ಆರ್.ಸಿ. (ಸಂ.) (1968). *ಶಿವಶರಣೆಯರ ವಚನಗಳು–ಸಮಗ್ರ ಸಂಪುಟ.* ಕರ್ನಾಟಕ ವಿಶ್ವವಿದ್ಯಲಯ. ಪು.ಸಂ. 233
9. ಅದೇ., ಪು.ಸಂ.233